ಸಂದರ್ಭಗಳಲ್ಲಿ ಮಹಿಳೆಯರೇ ಆಗಿರುತ್ತಾರೆ. ಈ ಘಟನೆಗಳು ಹೆಣ್ಣುಮಕ್ಕಳ ಬಗ್ಗೆ ಸಮಾಜ ಎಷ್ಟು ನಿರ್ದಯವಾಗಿದೆ ಎನ್ನುವುದರ ಸಂಕೇತದಂತಿವೆ. ವಿಶ್ವದಾದ್ಯಂತ ಪ್ರತಿ 11 ನಿಮಿಷಕ್ಕೆ ಓರ್ವ ಮಹಿಳೆಯ ಹತ್ಯೆ ನಡೆಯುತ್ತಿದೆ ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಹೇಳಿದ್ದರು. ಬಹುತೇಕ ಪ್ರಕರಣಗಳಲ್ಲಿ ಸಂಗಾತಿ ಅಥವಾ ಕುಟುಂಬದ ಸದಸ್ಯರಿಂದಲೇ ಹೆಣ್ಣುಮಕ್ಕಳ ಕೊಲೆಗಳು ನಡೆದಿವೆ. ಮರ್ಯಾದಾಹತ್ಯೆ, ವರದಕ್ಷಿಣೆ ಹತ್ಯೆಗಳು ಈಗಲೂ ನಡೆಯುತ್ತಿವೆ.

ಸುರಕ್ಷತೆಯ ಕಾರಣದಿಂದಾಗಿ ಹೆಣ್ಣುಮಕ್ಕಳನ್ನು ಮನೆಯಿಂದ ಹೊರಗೆ ಕಳುಹಿಸಲು ಹಿಂಜರಿಯುವ ಪೋಷಕರಿದ್ದಾರೆ. ಬದಲಾದ ಸಂದರ್ಭದಲ್ಲಿ, ಮನೆಯೊಳಗೇ ದೌರ್ಜನ್ಯ ನಡೆಯುತ್ತಿದೆ. ಮಹಿಳೆಯರ ಮೇಲಿನ ದೌರ್ಜನ್ಯ ಭಾರತಕ್ಕಷ್ಟೇ ಸೀಮಿತವಾದ ವಿದ್ಯಮಾನವಲ್ಲ. ವಿಶ್ವದ ಯಾವ ಭಾಗವೂ ಮಹಿಳೆಯರ ಪಾಲಿಗೆ ಸಂಪೂರ್ಣ ಸುರಕ್ಷಿತವಲ್ಲ. ಲಿಂಗಭೇದದ ಪ್ರಮಾಣದಲ್ಲಿ ವ್ಯತ್ಯಾಸ ಇರಬಹುದಾದರೂ, ಪರಿಪೂರ್ಣ ಲಿಂಗಸಮಾನತೆ ಸಾಧಿಸಿದ ಯಾವೊಂದು ದೇಶವೂ ಇಲ್ಲ. ಶಿಕ್ಷಣ, ವಿಜ್ಞಾನ–ತಂತ್ರಜ್ಞಾನ, ಸಾಹಿತ್ಯ, ಕಲೆ – ಯಾವುದರಿಂದಲೂ ಲಿಂಗಭೇದವನ್ನು ತೊಡೆದುಹಾಕುವುದು ಸಾಧ್ಯವಾಗಿಲ್ಲ. ನಾವು ಬದುಕುತ್ತಿರುವ ಮೊಬೈಲ್ ಫೋನ್ ಕಾಲಘಟ್ಟ ಮಹಿಳೆಯೆದುರು ಅಪಾರ ಸಾಧ್ಯತೆಗಳನ್ನು ತೆರೆದಿಟ್ಟಿದ್ದರೂ, ಆ ಸಾಧ್ಯತೆಗಳನ್ನು ಬಹಳಷ್ಟು ಸಂದರ್ಭಗಳಲ್ಲಿ ಗಂಡಸರು ನಿಯಂತ್ರಿಸುತ್ತಿರುತ್ತಾರೆ.

ಕೋವಿಡ್ ಕಾಲಘಟ್ಟ ಮಹಿಳೆಯರ ಮೇಲಿನ ಮೌಖಿಕ ಹಾಗೂ ದೈಹಿಕ ಕಿರುಕುಳವನ್ನು ಉಲ್ಬಣಗೊಳಿಸಿತ್ತು. ಕೊರೊನಾ ಕಾಲಘಟ್ಟದಲ್ಲಿ ಒಟ್ಟಾರೆ ಅಪರಾಧಗಳ ಸಂಖ್ಯೆ ಇಳಿಮುಖವಾಗಿದ್ದರೂ, ಕೌಟುಂಬಿಕ ಹಿಂಸೆಯ ಘಟನೆಗಳು ಹೆಚ್ಚು ವರದಿಯಾಗಿದ್ದವು. ದೌರ್ಜನ್ಯಕ್ಕೊಳಗಾದ ಮಹಿಳೆಯರ ದೂರುಗಳು ಸಾಮಾನ್ಯ ಸಂದರ್ಭಗಳಿಗಿಂತಲೂ ದುಪ್ಪಟ್ಟು ಪ್ರಮಾಣದಲ್ಲಿ ವರದಿಯಾದುದನ್ನು ರಾಷ್ಟ್ರೀಯ ಮಹಿಳಾ ಆಯೋಗ ಗುರ್ತಿಸಿತ್ತು.

ಹಿಂಸೆ–ಕ್ರೌರ್ಯದ ಘಟನೆಗಳಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಮಹಿಳೆಯರೇ ಸಂತ್ರಸ್ತೆಯರಾಗಿದ್ದರೂ, ಕೆಲವೊಮ್ಮೆ ಪುರುಷರು ಕೂಡ ಮಿಕಗಳಾಗಿರುವುದಿದೆ. ಹಿಂಸೆಯ ವ್ಯಸನಕ್ಕೊಳಗಾದ ಸಂದರ್ಭದಲ್ಲಿ ಹೆಣ್ಣು ಗಂಡಿಗಿಂತಲೂ ಕಡಿಮೆಯೇನಲ್ಲ. ಪ್ರಿಯಕರನೊಂದಿಗೆ ಇಲ್ಲವೇ ಮಕ್ಕಳೊಂದಿಗೆ ಸೇರಿಕೊಂಡು ಗಂಡನನ್ನು ಕೊಂದ ಹೆಂಡತಿಯರ ಉದಾಹರಣೆಗಳು ಸಾಕಷ್ಟಿರುವುದನ್ನು ಗಮನಿಸಬೇಕು.

### ಯಾಕಿಷ್ಟು ಹಿಂಸೆ-ಕ್ರೌರ್ಯ?

ಒಬ್ಬರನ್ನೊಬ್ಬರು ಕೊಂದುಕೊಳ್ಳುವ ಪ್ರಕ್ರಿಯೆ ದೈಹಿಕ ಸ್ವರೂಪದ್ದಷ್ಟೇ ಆಗಿರುವುದಿಲ್ಲ. ಮಾನಸಿಕವಾಗಿ ಕೂಡ ವ್ಯಕ್ತಿಗಳನ್ನು ಕೊನೆಗೊಳಿಸುವುದು

## ಸಂಬಂಧದಲ್ಲಿ ಹುಟ್ಟುವ ದ್ವೇಷ ಕ್ರೌರ್ಯದಲ್ಲಿ ಮೆರೆಯುತ್ತೆ

ಸಂಬಂಧಗಳಿಗೆ ಏನೇ ಹೆಸರು ಕೊಟ್ಟಿರಬಹುದು. ಗಂಡ–ಹೆಂಡತಿ, ಪ್ರೇಮಿ, ಅಪ್ಪ–ಮಕ್ಕಳು, ಅವ್ವ–ಮಕ್ಕಳು, ಸಹೋದರ ಸಂಬಂಧ ಯಾವುದೇ ಇದ್ದರೂ ಅದು ತೀವ್ರವಾದ ಭಾವನಾತ್ಮಕ ಬೆಸುಗೆ. ಅದರಲ್ಲಿ ಅವಲಂಬಿತ ಬಾಂಧವ್ಯ ಹೆಚ್ಚಿರುತ್ತದೆ. ಅವು ಹಾಗೆಯೇ ತಳಕು ಹಾಕಿಕೊಂಡಿರುತ್ತವೆ.

ಗೌತಮ ಬುದ್ಧ ಹೆಣ್ಣುಮಕ್ಕಳ ವಿಷಯದಲ್ಲಿ ಏಕೆ ಮಹಿಳೆ ಅಭದ್ರ ಭಾವದಲ್ಲಿ ಇರುತ್ತಾಳೆ, ಅವರಲ್ಲೇಕೆ ಅಸೂಯೆ ಕಾಡುತ್ತದೆ ಅನ್ನುವುದನ್ನು ಹೀಗೆ ನೋಡುತ್ತಾರೆ: ಆಕೆ ನಾಲ್ಕು ಗೋಡೆಗಳ ನಡುವೆ ಗಂಡಸಿನ ಸೇವೆಯಲ್ಲೇ ತನ್ನ ಜೀವನವನ್ನು ಸವೆಸಿರುತ್ತಾಳೆ. ಬೇರೆ ಜಗತ್ತನ್ನೇ ನೋಡದೆ ಇರುವುದರಿಂದ ಆಕೆ ಗಂಡನನ್ನು ಸಂಪೂರ್ಣ ಅವಲಂಬಿತಳಾಗಿರುತ್ತಾಳೆ. ತನ್ನ ಭಾವಕೋಶದ ಕೋಮಲ ಸಂಬಂಧದಲ್ಲಿ ಸಣ್ಣ ಏರುಪೇರಾದರೂ ಸಿಡಿಯುತ್ತಾಳೆ.

ಸಾಮಾನ್ಯವಾಗಿ ಸಂಬಂಧಗಳು ಪರಸ್ಪರ ಗೌರವ ಅಪೇಕ್ಷಿಸುತ್ತವೆ. ತಮ್ಮ ಅಗತ್ಯಗಳನ್ನು ಪೂರೈಸಬೇಕು, ಮೆಟೀರಿಯಲಿಸ್ಟಿಕ್ ವಾತಾವರಣದಲ್ಲಿ ವಸ್ತುಗಳನ್ನು ಕೊಳ್ಳಬೇಕು, ನೋಡಲು ಚೆನ್ನಾಗಿರಬೇಕು ಎನ್ನುವ ನಿರೀಕ್ಷೆಗಳೂ ಇರುತ್ತವೆ. ಎಲ್ಲಿ ನಿರೀಕ್ಷೆ ಇರುತ್ತೋ ಅಲ್ಲಿ ವೈಫಲ್ಯ, ದುಃಖ ಆಗುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಆಸೆಯೇ ದುಃಖಕ್ಕೆ ಮೂಲ ಎನ್ನಲು ಆಗಲ್ಲ. ಏಕೆಂದರೆ ಅದು ಆಸೆಯಲ್ಲ. ಸಂಬಂಧಗಳಲ್ಲಿರುವ ನಿರೀಕ್ಷೆ. ಅಪ್ಪ–ಅಮ್ಮರಿಂದ ಮಕ್ಕಳಿಗೆ, ಗಂಡನಿಂದ ಹೆಂಡತಿಗೆ, ಹೆಂಡತಿಯಿಂದ ಗಂಡನಿಗೆ ಇರುವ ನಿರೀಕ್ಷೆ ಅವರ ಸಂಬಂಧದ ನಡುವೆ ಅಟ್ಯಾಚ್‌ಮೆಂಟ್ ಬೆಳೆಸುತ್ತದೆ. ಈ ಅಟ್ಯಾಚ್‌ಮೆಂಟ್ ಮತ್ತು ದ್ವೇಷ ಒಂದೇ ನಾಣ್ಯದ ಎರಡು ಮುಖಗಳಂತೆ. ಈ ಅಟ್ಯಾಚ್‌ಮೆಂಟನ್ನೇ ಪ್ರೀತಿ ಎಂದು ಅರ್ಥ ಮಾಡಿಕೊಂಡಿದ್ದೇವೆ. ಆದರೆ ಪ್ರೀತಿ ಅದಲ್ಲ. ಪ್ರೀತಿ ನೀಡುವಂತಹದ್ದು, ಕೊಟ್ಟಷ್ಟು ಹೆಚ್ಚಾಗುತ್ತದೆಯೇ ಹೊರತು ಬರಿದಾಗುವುದಿಲ್ಲ. ನಮಗೆ ಇರುವ ತೀವ್ರವಾದ ಅಟ್ಯಾಚ್‌ಮೆಂಟನ್ನೇ ಪ್ರೀತಿ ಎಂದು ಭಾವಿಸಿದ್ದೇವೆ. ಅದರಲ್ಲಿ ಒಂದು ಸಣ್ಣ ನಿರೀಕ್ಷೆ ತಪ್ಪಿದರೂ ಅನುಮಾನಗಳು, ಬೈಗುಳ, ಜಗಳ ತಲೆ ಎತ್ತುತ್ತದೆ. ಅದೇ ಕಾರಣಕ್ಕೆ ಕುಟುಂಬದಲ್ಲಿ ಜಗಳ ತೀರ ಸಹಜವಾಗಿ ಕಾಣಿಸುತ್ತದೆ. ಅದೇ ಸಮಾಜದಲ್ಲಿ ಗೌರವದಿಂದ ಇರುತ್ತೇವೆ. ಕಚೇರಿಯಲ್ಲಿ ಕೋಪ ಬಂದರೂ ಎಗರಾಡುವುದಿಲ್ಲ. ಕುಟುಂಬದಲ್ಲಿ ಮುಲಾಜೇ ಇಲ್ಲದೆ ಜಗಳ ಆಡುತ್ತೇವೆ. ಇಲ್ಲಿ ಅಸಹ್ಯಗಳೂ ಇರುವುದಿಲ್ಲ. ಅದೇ ಕಚೇರಿಯಲ್ಲಿ ಎಚ್ಚರಿಕೆ ಇರುತ್ತದೆ. ‘ಈಗ ನನ್ನ ಗಂಡ ಕರೆ ಮಾಡಿದರೆ – ಬರ್ತಿದ್ದೇನೆ ಅಂದೆನಲ್ಲ... ತಲೆಯಲ್ಲಿ ಬುದ್ಧಿ ಇದೆಯಾ? ಒಂದು ಗಳಿಗೆ ತಾಳ್ಮೆಯಿಂದ ಇರಲು ಆಗುವುದಿಲ್ಲವೇ’ ಎಂದು ರೇಗಬಹುದು. ಸಂಬಂಧದಲ್ಲಿ ಭಾಷೆ ಬದಲಾಗಿಬಿಡುತ್ತದೆ. ತೀವ್ರವಾದ ಅಟ್ಯಾಚ್‌ಮೆಂಟ್ ದ್ವೇಷಕ್ಕೆ ಕಾರಣವಾಗುತ್ತದೆ. ಸಂಬಂಧದಲ್ಲಿ ಹುಟ್ಟುವ ದ್ವೇಷ ಏನನ್ನಾದರೂ ಮಾಡಿಸುತ್ತದೆ. ಬೈಯುವುದು, ಕ್ರೌರ್ಯ, ಅಸಹ್ಯವಾಗಿ ನಡೆದುಕೊಳ್ಳಲೂ ಹಿಂದೇಟು ಹಾಕುವುದಿಲ್ಲ. ಅತಿರೇಕದಲ್ಲಿ ಕೊಲೆ ಮಾಡುವ ಮಟ್ಟಕ್ಕೂ ಹೋಗಬಹುದು. ಎಲ್ಲಿ ತೀವ್ರವಾದ ಅಟ್ಯಾಚ್‌ಮೆಂಟ್ ಇರುತ್ತದೆಯೋ ಅಲ್ಲಿ ಕ್ರೌರ್ಯ ತಪ್ಪಿದ್ದಲ್ಲ.



ಕೆಲವು ಅಪರಾಧಗಳ ಹಿನ್ನೆಲೆ ನೋಡಿದಾಗ, ನಾವು ಮಾನಸಿಕ ಆರೋಗ್ಯವನ್ನು ಗಂಭೀರವಾಗಿ ನೋಡುವುದೇ ಇಲ್ಲ ಎನ್ನುವುದು ಗೊತ್ತಾಗುತ್ತದೆ. ಖಿನ್ನತೆಯಿಂದ ಇದ್ದವರನ್ನು ಹೇಗೆ ನೋಡಿಕೊಳ್ಳಬೇಕು ಎನ್ನುವ ಪ್ರಜ್ಞೆ ನಮಗಿಲ್ಲ. ಚಿಕಿತ್ಸೆಯ ಪ್ರಸ್ತಾಪ ಬಂದರೂ ‘ನನಗೇನು ಹುಚ್ಚು ಹಿಡಿದಿದಿಯಾ’ ಎನ್ನುತ್ತಾರೆ. ಏನೋ ಜಗಳದ ನಂತರ ‘ಬಾರೋ ಹೋಗಿ ಆಪ್ತಸಮಾಲೋಚಕರನ್ನಾದರೂ ಭೇಟಿ ಆಗೋಣ’ ಅಂದರೆ, ‘ನನಗೆ ತಲೆಕೆಟ್ಟಿಲ್ಲ. ನಿನಗೆ ಕೆಟ್ಟಿರುವುದು, ನೀನು ಹೋಗು’ ಎಂದು ದಬಾಯಿಸುವುದನ್ನು ನೋಡುತ್ತೇವೆ. ಒಟ್ಟಾರೆ ಆರೋಗ್ಯಪೂರ್ಣ ವಾತಾವರಣ ಇಲ್ಲ.

ಸಂಕೀರ್ಣವಾದ ಸಂಬಂಧದಲ್ಲಿ ಹಿಂಸೆಗೆ ನಾನಾ ಕಾರಣ. ಅಭದ್ರತೆ ಏನಾದರೂ ಮಾಡಿಸುತ್ತದೆ. ಅಭದ್ರತೆ ಅಸೂಯೆಯನ್ನು ಹುಟ್ಟಿಸುತ್ತದೆ. ಕೊಳ್ಳುಬಾಕತನಕ್ಕೂ ಸಂಬಂಧ ಆತುಕೊಂಡಿರುತ್ತದೆ. ಮಾರುಕಟ್ಟೆಯ ಅರ್ಥ ವ್ಯವಸ್ಥೆಗೂ ಅವಲಂಬಿತ ಸಂಬಂಧಕ್ಕೂ ನಂಟಿರುತ್ತದೆ. ನಮ್ಮ ಕೈಯಲ್ಲಿನ ಮೊಬೈಲ್ ಜಗತ್ತಿನ ನಾನಾ ರೂಪ ತೋರಿಸುತ್ತದೆ. ಪೂರೈಸಿಕೊಳ್ಳುವಷ್ಟು ಕಾಸಿರುವುದಿಲ್ಲ. ಮಕ್ಕಳಲ್ಲೂ ಅದೇ ಅಡಿಕ್ಷನ್. ಯುವಕರಲ್ಲಿ ಪ್ರೀತಿ ಪ್ರೇಮದ ಸಮಸ್ಯೆ. ಎಲ್ಲದಕ್ಕಿಂತ ಕೀಳರಿಮೆ ಬಹುತೇಕರಲ್ಲಿ ಕಾಡುತ್ತದೆ. ಯಾವ ಹಿನ್ನೆಲೆಯಿಂದ ಬಂದಿರುತ್ತಾರೋ ಅದರದ್ದೇ ಆದ ಕೀಳರಿಮೆ ಇರುತ್ತವೆ. ಬಣ್ಣ, ಜಾತಿ, ಲಿಂಗ, ಪ್ರದೇಶ, ವರ್ಗ, ಇದರ ನಡುವೆ ಸಂಬಂಧದಲ್ಲಿ ಧಾರಣ ಶಕ್ತಿಯನ್ನು ಮೀರಿದಾಗ ಕ್ರೌರ್ಯಕ್ಕೆ ಮುಂದಾಗುತ್ತದೆ.

**–ದು. ಸರಸ್ವತಿ, ಲೇಖಕಿ, ಸಾಮಾಜಿಕ ಕಾರ್ಯಕರ್ತೆ**